ಅನಿಲ ರಹಿತ ಪಡಿತರ ಚೀಟಿದಾರರಿಗೆ (ಬಿಪಿಎಲ್ ಮತ್ತು ಎಪಿಎಲ್ ಸೇರಿ) ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ 7 ಲೀಟರ್, ಇತರೆ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ 5 ಲೀಟರ್, ನಗರ ಪ್ರದೇಶದಲ್ಲಿ 4 ಲೀಟರ್, ಗ್ರಾಮಾಂತರ ಪ್ರದೇಶದಲ್ಲಿ 3 ಲೀಟರ್ ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ.

ಎಪಿಎಲ್ ಅನಿಲಸಹಿತ ಪಡಿತರ ಚೀಟಿದಾರರಿಗೆ ಯಾವುದೇ ಆಹಾರಧಾನ್ಯ ಹಂಚಿಕೆಯನ್ನು ನೀಡಲಾಗುತ್ತಿಲ್ಲ.

ಇ) ಸದ್ಯಕ್ಕೆ ಮಾಹಿತಿ ಲಭ್ಯವಿಲ್ಲ. ಸಂಬಂಧಪಟ್ಟ ರಾಜ್ಯಗಳಿಂದ ಮಾಹಿತಿ ಪಡೆದು ನಂತರ ಒದಗಿಸಲಾಗುವುದು.

817 ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬಾಲ ವಿಕಾಸ ಯೋಜನೆಯಡಿ ಅಂಗನವಾಡಿ ಕೇಂದ್ರಗಳ ಸಂಖ್ಯೆ ಹೆಚ್ಚಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ;

ಆ) ಉಡುಪಿ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಹೆಚ್ಚಿಸಲಾಗುವುದು;

ಇ) ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರಿಗೆ ಮಾಸಿಕ ಗೌರವ ಧನ ನೀಡಲಾಗಿದೆಯೇ; ಎಷ್ಟು ತಿಂಗಳವರೆಗೆ ನೀಡಲಾಗಿದೆ;

ಈ) ಅಂಗನವಾಡಿಗೆ ಸಂಪೂರ್ಣ ಗೌರವಧನ ಕೊಡದೇ ಇರಲು ಕಾರಣವೇನು; ಎಂದಿನಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ಗೌರವ ಧನ ಪಾವತಿಸಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಐಸಿಡಿ 2009, ದಿನಾಂಕ: 18.6.09ರಲ್ಲಿ 3ನೇ ಹಂತದ ಐಸಿಡಿಎಸ್ ವಿಸ್ತರಣೆಯಲ್ಲಿ ಹೆಚ್ಚುವರಿಯಾಗಿ 5786 ಅಂಗನವಾಡಿ ಕೇಂದ್ರಗಳು ಮತ್ತು 2926 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುತ್ತವೆ.

ಆ) ಸರ್ಕಾರದ ಆದೇಶದ ಸಂಖ್ಯೆ: ಮಮಇ 65 ಐಸಿಡಿ 2009, ದಿನಾಂಕ: 18.6.09ರ ಅನ್ವಯ ಉಡುಪಿ ಜಿಲ್ಲೆಗೆ ಈ ಕೆಳಕಂಡಂತೆ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

ಕ್ರ.ಸಂ.	ತಾಲ್ಲೂಕಿನ ಹೆಸರು	ಅಂಗನವಾಡಿ ಕೇಂದ್ರಗಳ ಸಂಖ್ಯೆ
1	ಉಡುಪಿ	21
2	ಕುಂದಾಪುರ	03
3	ಕಾರ್ಕಳ	07
	ಒಟ್ಟು	**31**

ಇ) ಹೌದು.

ಕ್ರ. ಸಂ.	ತಾಲ್ಲೂಕಿನ ಹೆಸರು	ಗೌರವಧನ ಪಾವತಿಸಿದ ವಿವರ ಮಾಹಿತಿ			
		ರಾಜ್ಯ		ಕೇಂದ್ರ	
		ಮೊತ್ತ ರೂ. ಲಕ್ಷಗಳಲ್ಲಿ	ಎಲ್ಲಿಯವರೆಗೆ ಪಾವತಿಸಿದೆ	ಮೊತ್ತ ರೂ. ಲಕ್ಷಗಳಲ್ಲಿ	ಎಲ್ಲಿಯ ವರೆಗೆ ಪಾವತಿಸಿದೆ
1	ಉಡುಪಿ	24.08	ಜೂನ್ 09	48.03	ಜೂನ್ 09

1	2	3	4	5	6
2	ಕುಂದಾಪುರ	12.59	ಅಂ.ಕಾ.– ಫೆಬ್ರವರಿ 09 ಅಂ.ಸ.– ಮಾರ್ಚ್ 09	44.52	ಜೂನ್ 09
3	ಕಾರ್ಕಳ	9.74	ಜೂನ್ 09	21.79	ಜೂನ್ 09

ಈ) ರಾಜ್ಯ ಸರ್ಕಾರದಿಂದ ಹೆಚ್ಚುವರಿ ಗೌರವಧನವನ್ನು ತ್ರೈಮಾಸಿಕ ಪ್ರಾರಂಭದಲ್ಲೆ ಬಿಡುಗಡೆ ಮಾಡಲಾಗಿದೆ. ಕಳೆದ ಸಾಲಿನ ಬಾಕಿ ಗೌರವಧನವನ್ನು ಪ್ರಸಕ್ತ ಸಾಲಿನಲ್ಲಿ ಪಾವತಿಸಿರುವುದರಿಂದ, ಈ ಸಾಲಿನ ಗೌರವಧನವನ್ನು ನೀಡಲಾಗಿರುವುದಿಲ್ಲ. ಹೆಚ್ಚುವರಿ ಅನುದಾನ ರೂ. 16.50 ಲಕ್ಷ ಮೊತ್ತದ ಮಂಜೂರಾತಿಗೆ ಕ್ರಮವಹಿಸಲಾಗುತ್ತಿದೆ.

818 ಶ್ರೀ ಗೋಪಾಲ್ ಭಂಡಾರಿ ಹೆಚ್. (ಕಾರ್ಕಳ): ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ತೋಟಗಾರಿಕಾ ಮಿಷನ್ ಮುಖೇನ ಕಳೆದ ಎರಡು ವರ್ಷಗಳಿಂದ ಹಾಗೂ ಪ್ರಸ್ತುತ ವರ್ಷದಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಿಗೆ ಒದಗಿಸಲಾದ ಅನುದಾನವೆಷ್ಟು; ಸಹಾಯಧನದ ಹಣವೆಷ್ಟು; ಖರ್ಚಾಗದೆ ಉಳಿದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಇ) ಸದರಿ ತಾಲ್ಲೂಕುಗಳ ಫಲಾನುಭವಿಗಳಿಗೆ ಯಾವ ಯಾವ ಉದ್ದೇಶಗಳಿಗೆ ಹಣ ಒದಗಿಸಲಾಗಿದೆ; (ಅನುದಾನವಾರು ಕಳೆದ 2 ವರ್ಷಗಳ ಮಾಹಿತಿ ಒದಗಿಸುವುದು)?